**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 19-03-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಜೆ ಎಂ ವಕೀಲರವರಿಂದಃ

ಆರೋಪಿಯನ್ನು ಯಾವಾ ದಿನಾಂಕದಂದು ಸಾಲ ಮರುಪಾವತಿ ಮಾಡುವಂತೆ ಕೇಳಿದ್ದೇವೆಂದು ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2023 ಮಾರ್ಚ್ 3 ನೇ ವಾರದಲ್ಲಿ ಕೇಳಿದ್ದೇವೆ ಎನ್ನುತ್ತಾರೆ. ಸದರಿ ವೇಳೆಯಲ್ಲಿ ಮ್ಯಾನೇಜರ್ ಮಾಯಿ ಕೃಷ್ಣ ರಿಕವರಿ ಆಫೀಸರ್ ಆದ ಶಿವಕುಮಾರ್ ಎಂಬುವವರು ಹೋಗಿದ್ದರು. ಸದರಿ ವೇಳೆಯಲ್ಲಿ ನಿಪಿ-1 ರ ಚೆಕ್ ನೀಡಿದ್ದರು ಎಂದು ಹೇಳುತ್ತಾರೆ. ಮುಖ್ಯ ಸಾಲಗಾರರನ್ನು ಯಾವಾ ದಿನದಂದು ಸಾಲ ಹಿಂದುರುಗಿಸಲು ಕೇಳಿದ್ದಾರೆಂದು ದಿನಾಂಕ ನನಗೆ ಗೊತ್ತಿಲ್ಲ. ಮುಖ್ಯಸಾಲಗಾರರು ಯಾವಾ ದಿನಾಂಕದಂದು ಚೆಕ್ ನೀಡಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿಯವರ ಬಳಿಯೂ ಕೂಡಾ ಮ್ಯಾನೇಜರ್ ಮಾಯಿ ಕೃಷ್ಣ, ರಿಕವರಿ ಆಫೀಸರ್ ಆದ ಶಿವಕುಮಾರ್ ಹೋಗಿದ್ದರು. ಸದರಿ ಆರೋಪಿಯ ಚೆಕ್ ಮತ್ತು ಮುಖ್ಯ ಸಾಲಗಾರರ ಚೆಕ್ ನಲ್ಲಿ ಯಾವುದನ್ನು ಮೊದಲು ಪಡೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಮತ್ತೊಬ್ಬ ಜಾಮೀನುದಾರರನ್ನು ಕೇಳಲು ಕೂಡಾ ಮೇಲೆ ಹೇಳಿದವರೇ ಹೋಗಿದ್ದು. ಆದರೆ ದಿನಾಂಕ ಗೊತ್ತಿಲ್ಲ. ಆದರೆ ಅವರನ್ನು ಕೂಡಾ ಮಾರ್ಚ್ 3 ನೇ ವಾರದಲ್ಲಿ ಕೇಳಿರುತ್ತಾರೆ. ಆರೋಪಿಯು ಯಾವಾ ದಿನಾಂಕದಂದು ಚೆಕ್ ನೀಡಿದ್ದಾರೆಂದು ನನಗೆ ಗೊತ್ತಿಲ್ಲ. ಮುಖ್ಯಸಾಲಗಾರರು ಮತ್ತು ಮತ್ತೊಬ್ಬ ಜಾಮೀನುದಾರರು ಯಾವಾ ದಿನಾಂಕದಂದು ಚೆಕ್ ನೀಡಿದ್ದಾರೆಂದು ಗೊತ್ತಿಲ್ಲ. ಆರೋಪಿಗೆ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿದ ನಂತರ ದಿಃ17-05-2023 ರಂದು ನೋಟಿಸ್ ನೀಡಿರುತ್ತೇವೆ. ಮುಖ್ಯಸಾಲಗಾರರ ಚೆಕ್ ನ್ನು ಯಾವಾಗ ಹಾಜರುಪಡಿಸಲಾಗಿತ್ತು ಮತ್ತು ನೋಟಿಸ್ ನೀಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಮತ್ತೊಬ್ಬ ಜಾಮೀನುದಾರರಿಗೆ ಆರೋಪಿಗೆ ನೋಟಿಸ್ ನೀಡಿದ ದಿನದಂದೇ ನೋಟಿಸ್ ನೀಡಲಾಗಿತ್ತು. ನೋಟಿಸ್ ನೀಡುವ ಕಾಲಕ್ಕೆ ಒಂದೇ ಸಾಲಕ್ಕೆ ಸಂಬಂಧಿಸಿದಂತೆ ಮುಖ್ಯ

ಸಾಲಗಾರರು ಮತ್ತು ಇಬ್ಬರು ಜಾಮೀನುದಾರರಿಗೂ ನೋಟಿಸ್ ನೀಡುತ್ತಿದ್ದೇವೆ ಎನ್ನುವ ವಿಚಾರ ನನಗೆ ಗೊತ್ತಿತ್ತು. ಕರ್ತವ್ಯ ನಿಮಿತ್ತ ಕಚೇರಿಯ ವೇಳೆಯಲ್ಲಿ ಹೊರಗೆ ಹೋದಾಗ, ದಿನಾಂಕ ಮತ್ತು ಉದ್ದೇಶವನ್ನು ಮತ್ತು ಸಮಯವನ್ನು ರಿಜಿಸ್ಟರ್ ನಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಅದರಂತೆ ಆರೋಪಿಯಿಂದ ಸಾಲ ವಸೂಲಿಗಾಗಿ ಹೋಗಿರುವ ವಿಚಾರವನ್ನು ಕೂಡಾ ರಿಜಿಸ್ಟರ್ ನಲ್ಲಿ ನಮೂದಿಸಿಲಾಗಿದೆ ಎಂದರೆ ಸರಿ. ಸದರಿ ರಿಜಿಸ್ಟರ್ ನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಹಾಜರುಪಡಿಸುತ್ತೇನೆ ಎನ್ನುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು